ಇರಬಹುದು. ಆದರೂ 1857ರ ಚಳವಳಿ ಜನರ ದಂಗೆಯಾಗಿತ್ತು. ಇಲ್ಲಿ ಅವರು ಸರಳವಾಗಿ ಒಬ್ಬ ಸುಲ್ತಾನನ್ನು ಸೋಲಿಸಿ ತಮ್ಮ ಆಳ್ವಿಕೆ ಸ್ಥಾಪಿಸಿಬಿಟ್ಟರು.

- **ಒಂದು ಕಾಲಕ್ಕೆ ಮಧ್ಯ ಏಶಿಯಾದಿಂದ ವಿಜ್ಞಾನ, ಗಣಿತ, ತತ್ವಶಾಸ್ತ್ರದಲ್ಲಿ ದೊಡ್ಡ ವಿದ್ವಾಂಸರು ಹೊರಹೊಮ್ಮಿದರು. ಈಗ ಕ್ರೀಡೆ, ವಿಜ್ಞಾನ, ಸಂಶೋಧನೆ ಯಾವುದೇ ಕ್ಷೇತ್ರದ ಸಾಧನೆಯಲ್ಲೂ ಮುಸ್ಲಿಮರು ಕಾಣುವುದಿಲ್ಲ.**

ಇದಕ್ಕೆ ಚಾರಿತ್ರಿಕ ಕಾರಣವಿದೆ. ಟರ್ಕಿಯ ಖಲೀಫ ಇಡೀ ಜಗತ್ತಿನ ಮುಸ್ಲಿಮರ ಮೇಲೆ ನಿಯಂತ್ರಣ ಇರಿಸಿಕೊಂಡಿದ್ದ. ಏಕಕಾಲಕ್ಕೆ ರಾಜಕೀಯ ಮತ್ತು ಧಾರ್ಮಿಕ ನಾಯಕನಾಗಿದ್ದ. ಎರಡೂ ದೊಡ್ಡ ಶಕ್ತಿಗಳು ಒಂದೇ ಕಡೆ ಕೇಂದ್ರೀಕರಣವಾದರೆ ಒಂದು ಬಗೆಯ ಯಥಾಸ್ಥಿತಿ ಬಂದುಬಿಡುತ್ತದೆ. ಯೂರೋಪಿನಲ್ಲಿ ಇವೆರಡೂ ಶಕ್ತಿಗಳನ್ನು ಬೇರ್ಪಡಿಸಲಾಯಿತು. ಚರ್ಚು ಮತ್ತು ದೊರೆಯ ನಡುವೆ ಸಂಘರ್ಷ ಇರುತ್ತಿತ್ತು. ಇದರಿಂದ ಸಾಮಾಜಿಕ ಬದಲಾವಣೆಗೆ ಬೇಕಾದ ಪ್ರಕ್ರಿಯೆ ಸದಾ ಜೀವಂತವಾಗಿ ಜರುಗುತ್ತಿತ್ತು. ವಿಜ್ಞಾನದ ಯಾವುದೊ ಒಂದು ಸಂಶೋಧನೆ ಆಗುತ್ತಿದೆ ಎಂದು ಭಾವಿಸಿಕೊಳ್ಳಿ, ಚರ್ಚು ಅದನ್ನು ಬೆಂಬಲಿಸುತ್ತಿಲ್ಲವಾದರೆ, ರಾಜ ಈ ಸಂಶೋಧನೆ ಸರಿಯಿದೆ ಎನ್ನುತ್ತಿದ್ದ. ರಾಜ ಸರಿಯಿದೆ ಎಂದಿದ್ದನ್ನು ಚರ್ಚು ಒಪ್ಪದೆ ಹೋಗಬಹುದು. ಈ ಬಗೆಯ ವೈರುಧ್ಯ ಮತ್ತು ಸಂಘರ್ಷಗಳ ನಡುವೆಯೇ ಪ್ರಗತಿಯ ಬೀಜಗಳಿರುತ್ತವೆ. ಇಸ್ಲಾಮಿಕ್ ಜಗತ್ತಿನಲ್ಲಿ ಈ ಬಗೆಯ ಸಂಘರ್ಷಗಳನ್ನು ಖತಂ ಮಾಡಲಾಗಿತ್ತು. ನಿಮಗೆ ಗೊತ್ತಿರಬೇಕು, ತುರ್ಕಿಯಲ್ಲಿ 200 ವರ್ಷಕಾಲ ಮುದ್ರಣ ಯಂತ್ರಕ್ಕೆ ನಿಷೇಧವಿತ್ತು. ಅದನ್ನು ಯೂರೋಪಿನಲ್ಲಿ ಕಂಡುಹಿಡಿದಾಗ ಖಲೀಫ ಅದು ಧರ್ಮನಿಷಿದ್ಧವೆಂದು ಫತ್ವಾ ಹೊರಡಿಸಿದನು. ಅವನೇ ಧಾರ್ಮಿಕ ರಾಜಕೀಯ ಮುಖಂಡನಾದ ಕಾರಣ, ಜನ ಒಪ್ಪಬೇಕಾಯಿತು. ಇದು ಯೂರೋಪಿನಲ್ಲಿ ಆಗಲಿಲ್ಲ. ಇದರಿಂದ ಅದು ಮೂರು ಶತಮಾನಗಳ ಮುನ್ನಡೆ ಸಾಧಿಸಿತು. ಇಸ್ಲಾಮಿಕ್ ಜಗತ್ತು ಹಿಂದೆ ಬಿದ್ದಿತು.

- **ಇರಾನಿನಲ್ಲಿ ಸದ್ಯಕ್ಕೆ ಧಾರ್ಮಿಕ ನಾಯಕರೇ ರಾಜಕೀಯ ನಾಯಕರಾಗಿರುವ ಸನ್ನಿವೇಶವಿದೆ. ಅಲ್ಲಿಯೂ ವಿಜ್ಞಾನ ತಂತ್ರಜ್ಞಾನ ಕುರಿತು ನಿರ್ಬಂಧಗಳು ಇವೆಯೇ?**

ಟರ್ಕಿಯಲ್ಲಿದ್ದಂತೆ ಇಲ್ಲ. ಇರಾನಿನಲ್ಲಿ ಶಿಕ್ಷಣ ಮೂಲಸೌಕರ್ಯ ಕ್ಷೇತ್ರಗಳಲ್ಲಿ ಬಹಳ ಅಭಿವೃದ್ಧಿಯಾಗಿದೆ. ಇಲ್ಲಿ ರಾಜಕೀಯವಾಗಿ ಸಾಮಾಜಿಕವಾಗಿ ಎರಡು ಭಾಗಗಳಿವೆ. ಅಲ್ಲಿನ ಶಿಕ್ಷಿತ ಮಧ್ಯಮವರ್ಗ ಕುಲೀನ ಹಾಗೂ ಬುದ್ಧಿಜೀವಿ ವರ್ಗಗಳು ಈಗಿರುವ ಪ್ರಭುತ್ವದ ವಿರುದ್ಧವಾಗಿವೆ. ಈ ಪ್ರತಿರೋಧದ ಸನ್ನಿವೇಶ ಎಲ್ಲೀತನಕ ಇರುತ್ತದೆಯೊ ನೋಡಬೇಕು. ಒಮ್ಮೆ ಧಾರ್ಮಿಕ ನಾಯಕರಿಗೆ ರಾಜಕೀಯ ಅಧಿಕಾರ ಬಂದರೆ, ಅದನ್ನು ಅವರು ಚೆನ್ನಾಗಿ ಭದ್ರಪಡಿಸಿಕೊಳ್ಳುತ್ತಾರೆ. ಯಾವ ಸಮಾಜವೂ ಸಂಪ್ರದಾಯವಾದಿಗಳ ಹಿಡಿತದಲ್ಲಿ ಬಹಳ ಕಾಲ ಇರಲಾರದು. ಅದರೊಳಗಿಂದಲೇ ಕ್ರಾಂತಿಯ ಮೊಳಕೆಗಳು ಒಡೆಯುತ್ತವೆ.

### ರಹಮತ್ ತರೀಕೆರೆ

ಕನ್ನಡದ ಪ್ರಮುಖ ಲೇಖಕ ರಹಮತ್ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರು. ಅವರ ಪ್ರಕಟಿತ ಪ್ರಮುಖ ಪುಸ್ತಕಗಳು: 'ಪ್ರತಿಸಂಸ್ಕೃತಿ', 'ಮರದೊಳಗಣ ಕಿಚ್ಚು', 'ಅಮೀರ್‌ಬಾಯಿ ಕರ್ನಾಟಕಿ', 'ನಡೆದಷ್ಟೂ ನಾಡು', 'ಕರ್ನಾಟಕದ ನಾಥ ಪಂಥ', 'ಕರ್ನಾಟಕದ ಸೂಫಿಗಳು' 'ಅಂಡಮಾನ್ ಕನಸು', 'ಕತ್ತಿಯಂಚಿನ ದಾರಿ', 'ಲೋಕವಿರೋಧಿಗಳ ಜೊತೆಯಲ್ಲಿ'. ರಹಮತ್, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರು.